ಲಿಂಗಸೂಗೂರು ತಾಲ್ಲೂಕಿನ ಲಿಂಗಸೂಗೂರು ಪಟ್ಟಣಕ್ಕೆ ಡಿಪ್ಲೋಮ ಕಾಲೇಜು ಪ್ರಾರಂಭಿಸುವುದು.

413 (570) ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನಲ್ಲಿ ಲಿಂಗಸೂಗೂರು ಪಟ್ಟಣಕ್ಕೆ ಸರ್ಕಾರಿ ಡಿಪ್ಲೋಮಾ ಕಾಲೇಜನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಯು ಸರ್ಕಾರದ ಗಮನದಲ್ಲಿಯೇ;

2. ಹಾಗಿದಲ್ಲಿ ಈ ವರ್ಷದ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ಡಿಪ್ಲೋಮಾ ಕಾಲೇಜನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ;

3. ಕಾಲೇಜನ್ನು ಪ್ರಾರಂಭಿಸಲು ಬೇಕಾದ ಮೂಲಭೂತ ಸೌಕರ್ಯಗಳೇನು; ಕಾಲೇಜನ್ನು ಪ್ರಾರಂಭಿಸಲು ಬೇಕಾಗಬಹುದಾದ ಒಟ್ಟು ಅಂದಾಜು ಹಣವೆಷ್ಟು?

ಡಾ.ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

1. ಇಲ್ಲ

2. 2002-03ನೇ ಸಾಲಿಗೆ ರಾಜ್ಯದಲ್ಲಿ 05 ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಎಐಸಿಟಿಇ ನವದೆಹಲಿ ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

3. ಪಾಲಿಟೆಕ್ನಿಕ್ ಸಂಸ್ಥೆಯನ್ನು ಪ್ರಾರಂಭಿಸಲು ನಿಯಮ 10 (ಕೆ) ಯನುಸಾರ ಎಐಸಿಟಿಇ ನವದೆಹಲಿಯ ಅನುಮೋದನೆ ಪಡೆಯಬೇಕಾಗುತ್ತದೆ. ಪಾಲಿಟೆಕ್ನಿಕ್ ಸಂಸ್ಥೆ ಪ್ರಾರಂಭಿಸುವ ಸಂಬಂಧದಲ್ಲಿ ನಿಯಮಾವಳಿ ರೀತ್ಯ ಗ್ರಾಮೀಣ ಪ್ರದೇಶದಲ್ಲಿ 20-00 ಎಕರೆ ಜಮೀನು ಇರಬೇಕಾಗುತ್ತದೆ. ಯಾವುದೇ ಒಂದು ಸುಸಜ್ಜಿತ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸಬೇಕಾದರೆ ಕಟ್ಟಡ, ಯಂತ್ರೋಪಕರಣ, ಪೀಠೋಪಕರಣ, ಗ್ರಂಥಾಲಯ ಪುಸಕ್ತ ಮುಂತಾದ ಮೂಲಭೂತ ಸೌಲಭ್ಯಗಳನ್ನು ಪೂರೈಸಲು ಸುಮಾರು ರೂ.5.00 ಕೋಟಿಗಳಷ್ಟು ಆಯವ್ಯಯದ ಆಗತ್ಯತೆ ಇರುತ್ತದೆ.

ಲಿಂಗಸಗೂರು ಪಟ್ಟಣದ ಆಸ್ಪತ್ರೆಯ ನಿರ್ಮಾಣ

414 (572) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಲಿಂಗಸಗೂರು ತಾಲ್ಲೂಕಿನ ಲಿಂಗಸಗೂರು ಪಟ್ಟಣದಲ್ಲಿ 100 ಹಾಸಿಗೆಯ ಆಸ್ಪತ್ರೆಯನ್ನು ಯಾವ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿದೆ?

2. ಈ ಆಸ್ಪತ್ರೆಯ ಕಾಮಗಾರಿಯು ಕಳಪೆ ಮಟ್ಟದಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಈ ಕಾಮಗಾರಿಯು ತುಂಬಾ ಮಂದಗತಿಯಲ್ಲಿ ಸಾಗಲು ಕಾರಣವೇನು?

4. ಸದರಿ ಆಸ್ಪತ್ರೆಯ ನಿರ್ಮಾಣಕ್ಕಾಗಿ ಗೊತ್ತು ಪಡಿಸಿದ ಹಣವೆಷ್ಟು? ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು? ಹಾಗೂ ಯಾವಾಗ ಮುಕ್ತಾಯವಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1. ಲಿಂಗಸಗೂರು ತಾಲ್ಲೂಕಿನ ಲಿಂಗಸಗೂರು ಪಟ್ಟಣದಲ್ಲಿ 100 ಹಾಸಿಗೆ ಆಸ್ಪತ್ರೆಯ ಅಭಿವೃದ್ಧಿ ಕಾರ್ಯವನ್ನು ಕರ್ನಾಟಕ ದ್ವೀತಿಯ ಹಂತ ಆಸ್ಪತ್ರೆಗಳ ಅಭಿವೃದ್ಧಿ (ಕೆಎಫ್‌ಡಬ್ಲ್ಯು) ಯೋಜನೆಯಡಿ ತೆಗೆದುಕೊಳ್ಳಲಾಗಿದೆ.

2. ಈ ಕಾಮಗಾರಿಯ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲು ಬಾಹ್ಯ ಗುಣಮಟ್ಟ ನಿಯಮಂತ್ರಣ ಸಂಸ್ಥೆಯಾದ ಮೆ: ಟಾರ್‌ಸ್ಟೀಲ್ ರಿಸರ್ಚ್ ಫೌಂಡೇಶನ್ (ಇಂಡಿಯಾ) ಲಿ., ರವರು ಕಾಮಗಾರಿಗಳನ್ನು ಪರಿಶೀಲಿಸಿ ಕಾಲಾನುಕಾಲಕ್ಕೆ ದೃಡೀಕರಿಸಿರುತ್ತಾರೆ. ಈ ಆಸ್ಪತ್ರೆ ಕಾಮಗಾರಿಗಳ ಬಗ್ಗೆ ಕರ್ನಾಟಕ ರೈತ ಸಂಘ, ಲಿಂಗಸಗೂರು ರವರು ಸಲ್ಲಿಸಿದರಿಂದ ಕಾಮಗಾರಿಯನ್ನು ಪರಿಶೀಲಿಸಲು ಮೆ: ಟಾರ್‌ಸ್ಟೀಲ್ ರಿಸರ್ಚ್ ಫೌಂಡೇಶನ್ (ಇಂಡಿಯಾ) ಲಿ.,ಇವರಿಗೆ ಒಪ್ಪಿಸಲಾಯಿತು ಮತ್ತು ಸದರಿ ಸಂಸ್ಥೆಯು ದೃಡೀಕರಿಸಿದ ನಂತರ ಕಾಮಗಾರಿಯನ್ನು ಮುಂದುವರಿಸಲಾಯಿತು. ಈ ಆಸ್ಪತ್ರೆ ಕಾಮಗಾರಿಯ ಗುಣಮಟ್ಟವು ಉತ್ತಮವಾಗಿರುವುದು ವ್ಯಕ್ತಪಟ್ಟಿದೆ.

3. ಕಾಮಗಾರಿಯ ತುಂಬಾ ಮಂದಗತಿಯಲ್ಲಿ ಸಾಗುತ್ತಿಲ್ಲ.

4. ಈ ಆಸ್ಪತ್ರೆ ಕಾಮಗಾರಿಯನ್ನು ರೂ.198.98 ಲಕ್ಷಗಳಿಗೆ ಗುತ್ತಿಗೆ ವಹಿಸಲಾಗಿದ್ದು, ಇದುವರೆವಗೆ ರೂ.127.10 ಲಕ್ಷಗಳು ಖರ್ಚಾಗಿರುತ್ತದೆ. ಗುತ್ತಿಗೆ ಕರಾರಿನನ್ವಯ ಕಾಮಗಾರಿಗಳನ್ನು ಆಕ್ಟೋಬರ್ - 2002ಕ್ಕೆ ಪೂರ್ಣಗೊಳಿಸಬೇಕಾಗಿದೆ.

ಚಿಕ್ಕಬಳ್ಳಾಪುರದಲ್ಲಿ ಟಿ.ಬಿ. ಆಸ್ಪತ್ರೆ ಹಾಗೂ ಬ್ಲಡ್ ಬ್ಯಾಂಕ್ ಮಂಜೂರಾತಿ

415 (863) ಶ್ರೀಮತಿ ಅನುಸೂಯಮ್ಮ ನಟರಾಜನ್ ಕೆ.ಎ. (ಚಿಕ್ಕಬಳ್ಳಾಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಸರ್ಕಾರಿ ಆಸ್ಪತ್ರೆಗಳಲ್ಲಿ ಅಧಿಕಾರಿಗಳು ಸರಿಯಾಗಿ ಕಾರ್ಯ ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ರೋಗಿಗಳಿಗೆ ಒದಗಿಸುತ್ತಿರುವ ಔಷಧಿಗಳ ದುರುಪಯೋಗವಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1. ಬಂದಿದೆ

2. ಔಷಧಿಗಳು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.